**ಕರ್ನಾಟಕ ಸರ್ಕಾರ**

**ಕಂದಾಯ ಇಲಾಖೆ**

## ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ


ಒನಕೆ ಓಬವ್ವ ವೃತ್ತ
ಚಿತ್ರದುರ್ಗ.

**ದೂರವಾಣಿ ಸಂಖ್ಯೆ:222811, 222538**
**ಫ್ಯಾಕ್ಸ್ ಸಂಖ್ಯೆ: 08194-224355**


---

ವಿಷಯ : ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆ-2020 ಕ್ಕೆ ಸಂಬಂಧಿಸಿದಂತೆ ಚುನಾವಣೆ ಎರಡು ಹಂತಗಳಲ್ಲಿ ನಡೆಯಲಿದ್ದು, ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆಯಲಿರುವ ಸಂತೆ, ಜಾತ್ರೆ ಮತ್ತು ಉತ್ಸವ ಇತ್ಯಾದಿಗಳನ್ನು ನಿಷೇಧಿಸುವ ಬಗ್ಗೆ.

ಉಲ್ಲೇಖ : ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು ಇವರ ಆದೇಶ ಸಂ.ರಾಚುಆ/134/ಇ.ಜಿ.ಪಿ 2020 ದಿ.01-12-2020.

$$$$$$$

ಗ್ರಾಮ ಪಂಚಾಯಿತಿ ಸಾರ್ವತ್ರಿಕ ಚುನಾವಣೆ-2020ಕ್ಕೆ ಸಂಬಂಧಿಸಿದಂತೆ ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೊದಲನೇ ಹಂತದಲ್ಲಿ ಚಿತ್ರದುರ್ಗ, ಹೊಸದುರ್ಗ ಮತ್ತು ಹೊಳಲ್ಕೆರೆ ತಾಲ್ಲೂಕುಗಳಲ್ಲಿ ಮತದಾನವು ದಿನಾಂಕ:22-12-2020 ರಂದು (ಮಂಗಳವಾರ) ಹಾಗೂ ಹಿರಿಯೂರು, ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ಮತದಾನವು ದಿನಾಂಕ:27-12-2020 (ಭಾನುವಾರ) ರಂದು ನಡೆಯಲಿರುತ್ತದೆಂದು ಚುನಾವಣಾ ಆಯೋಗವು ವೇಳಾಪಟ್ಟಿ ಹೊರಡಿಸಿರುತ್ತದೆ.

ಚುನಾವಣೆ ನಡೆಯುವ ದಿನಾಂಕದಂದು ಬೆಳಗ್ಗೆ 7-00 ಗಂಟೆಯಿಂದ ಸಂಜೆ 5-00 ಗಂಟೆವರೆಗೆ ಮತದಾನ ನಡೆಯಲಿದ್ದು, ಚುನಾವಣೆ ನಡೆಯಲಿರುವ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಂತೆ ಜಾತ್ರೆ ಇತ್ಯಾದಿಗಳನ್ನು ನಿಷೇಧಿಸುವಂತೆ ಉಲ್ಲೇಖಿತ ಪತ್ರದಲ್ಲಿ ಮಾನ್ಯ ಕಾರ್ಯದರ್ಶಿಗಳು, ಚುನಾವಣಾ ಆಯೋಗ ಬೆಂಗಳೂರು ರವರ ನಿರ್ದೇಶನವಿದ್ದು, ಅದರನ್ವಯ ಈ ಕೆಳಕಂಡಂತೆ ಆದೇಶ ಹೊರಡಿಸಿರುತ್ತೇನೆ.

## ಆದೇಶ

**ಸಂಖ್ಯೆ:ಎಂ.ಎ.ಜಿ(3)ಸಿ.ಆರ್/89/2020-21** **ದಿನಾಂಕ:07-12-2020**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, **ಕವಿತಾ ಎಸ್.ಮನ್ನಿಕೇರಿ, ಭಾ.ಆ.ಸೇ., ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ** ಆದ ನಾನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 36 ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಈ ಕೆಳಕಂಡ ಅಂಕಣ(3) ರಲ್ಲಿನ ತಾಲ್ಲೂಕುಗಳಲ್ಲಿನ ಚುನಾವಣೆ ನಡೆಯುವ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಗೆಯ ಸಂತೆ, ಜಾತ್ರೆ, ಉತ್ಸವ ಇತ್ಯಾದಿಗಳನ್ನು ಅಂಕಣ(4) ರಲ್ಲಿ ನಿಗಧಿಪಡಿಸಿರುವ ಅವಧಿಗೆ ನಿಷೇಧಿಸಿ ಆದೇಶಿಸಿರುತ್ತೇನೆ.

| ಕ್ರಮ ಸಂಖ್ಯೆ | ಹಂತ | ತಾಲ್ಲೂಕಿನ ಹೆಸರು | ಅವಧಿ |
|---|---|---|---|
| 1 | 2 | 3 | 4 |
| 1 | ಮೊದಲನೇ ಹಂತ | ಚಿತ್ರದುರ್ಗ.<br>ಹೊಸದುರ್ಗ.<br>ಹೊಳಲ್ಕೆರೆ. | 22-12-2020 ಬೆಳಗ್ಗೆ 6-00 ಗಂಟೆಯಿಂದ ಮಧ್ಯರಾತ್ರಿ 12-00 ಗಂಟೆಯವರೆಗೆ |
| 2 | ಎರಡನೇ ಹಂತ | ಹಿರಿಯೂರು.<br>ಚಳ್ಳಕೆರೆ.<br>ಮೊಳಕಾಲ್ಮೂರು. | 27-12-2020 ಬೆಳಗ್ಗೆ 6-00 ಗಂಟೆಯಿಂದ ಮಧ್ಯರಾತ್ರಿ 12-00 ಗಂಟೆಯವರೆಗೆ |

(ಕವಿತಾ.ಎಸ್.ಮನ್ನಿಕೇರಿ,)
ಜಿಲ್ಲಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ.

**ಪ್ರತಿಯನ್ನು :-**

1. ಆಯುಕ್ತರು, ರಾಜ್ಯ ಚುನಾವಣಾ ಆಯೋಗ, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳಿ ಕಟ್ಟಡ (ಹಿಂಭಾಗ), 1ನೇ ಮಹಡಿ, ನಂ.8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-52 ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, 2 ನೇ ಮಹಡಿ ಬಿ.ಎಂ.ಟಿ.ಸಿ.ಕಟ್ಟಡ ಕರ.ಹೆಚ್.ರಸ್ತೆ, ಶಾಂತಿನಗರ ಬೆಂಗಳೂರು ರವರಿಗೆ
3. ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ರವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
4. ಪೊಲೀಸ್ ಉಪಾಧೀಕ್ಷಕರು, ಚಿತ್ರದುರ್ಗ/ ಹಿರಿಯೂರು/ ಚಳ್ಳಕೆರೆ
5. ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳಿಗೆ.
6. ಜಿಲ್ಲಾ ವಾರ್ತಾಧಿಕಾರಿಗಳು, ಚಿತ್ರದುರ್ಗ.
7. ಜಿಲ್ಲೆಯ ಎಲ್ಲಾ ಕಾರ್ಯನಿರ್ವಹಣಾಧಿಕಾರಿಗಳಿಗೆ.
8. ಈ ಕಚೇರಿಯ ಚುನಾವಣಾ ಶಾಖೆಗೆ.